ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಸಿರುಗುಪ್ಪ

**ಸಿ.ಸಿ.ನಂ:673/2015**

**ಸಿಡಬ್ಲ್ಯೂ 01 ಪಿ.ಡಬ್ಲ್ಯೂ 01**

ಸಾಕ್ಷಿದಾರರ ಹೆಸರು ಃ ಖಾದರ್ ಭಾಷಾ
ತಂದೆಯ ಹೆಸರು ಃ ನೂರುಲ್ಲಾ
ವಯಸ್ಸು ಃ 24 ವರ್ಷ
ವೃತ್ತಿ ಃ ವ್ಯವಸಾಯ
ವಾಸ ಃ ಹಚ್ಚೋಳಿ ಗ್ರಾಮ

ಪ್ರಮಾಣ ಮಾಡಿದ ದಿನಾಂಕಃ11.04.2018 ಮುಖ್ಯ ವಿಚಾರಣೆಃ ಎ .ಪಿ .ಪಿ ಇವರಿಂದ.

ಚಾಸಾ 2 ಪರಿಚಯವಿರುತ್ತಾರೆ. ದಿನಾಂಕ 18.02.2015 ರಂದು ನಾನು ಮತ್ತು ಚಾಸಾ 2 ಕೂಡಿಕೊಂಡು ಚಾಸಾ 2 ರವರ ಮೋಟಾರ್ ಸೈಕಲ್ ನಂ ಕೆ ಎ 34 ಡ0449 ನೇದ್ದರಿಲ್ಲಿ ಹಚ್ಚೋಳಿಯಿಂದ ಬಳ್ಳಾರಿಗೆ ಹೊರಟಿದ್ದೆವು. ಮೋಟಾರ್ ಸೈಕಲನ್ನು ಚಾಸಾ 2 ರವರು ನಡೆಸುತ್ತಿದ್ದರು. ಸಿಂಧನೂರು-ಸಿರುಗುಪ್ಪ ಮುಖ್ಯ ರಸ್ತೆಯ ಮೇಲೆ ಸಿರುಗುಪ್ಪ ಕಡೆಗೆ ಬರುತ್ತಿರುವಾಗ ಸಿರುಗುಪ್ಪ ನಗರದ ವೆಲ್‌ಕಮ್ ಬೋರ್ಡ್ ಹತ್ತಿರ ಎಡಬದಿಯ ರಸ್ತೆಯಲ್ಲಿ ನಾವು ಹೋಗುತ್ತಿರುವಾಗ ಆರೋಪಿತನು ತನ್ನ ಬಸನ್ನು ಅತಿ ವೇಗವಾಗಿ ಚಲಾಯಿಸಿಕೊಂಡು ಬಂದು ನಮಗೆ ಡಿಕ್ಕಿ ಪಡೆಸಿರುತ್ತಾನೆ. ಆಗ ಸಮಯ 10.45 ಗಂಟೆಯಾಗಿರುತ್ತದೆ. ಅದರಂತೆ ನಮ್ಮ ಹಿಂದೆ ಬರುತ್ತಿದ್ದ ಬುಲೆರೋ ಗಾಡಿಗೂ ಸಹ ಅಪಘಾತವಾಗಿರುತ್ತದೆ. ಇದರಿಂದ ನಾವು ಮೋಟಾರ್ ಸಮೇತ ಕೆಳಕ್ಕೆ ಬಿದ್ದೆವು. ಆಗ ನನಗೆ ಎಡಗಣ್ಣಿನ ಕೆಳಭಾಗದಲ್ಲಿ, ಎಡಮೊಣಕಾಲು ಹತ್ತಿರ ಮತ್ತು ಬೆನ್ನಿಗೆ ಗಾಯಗಳಾಗಿರುತ್ತವೆ. ಚಾಸಾ 2 ರವರಿಗೆ ಮುಖಕ್ಕೆ ಮತ್ತು ಎಡಕೈಗೆ ಗಾಯಗಳಾಗಿದ್ದವು. ಚಾಸಾ 3 ಬುಲೆರೋ ವಾಹನದ ಚಾಲಕನಿಗೆ ಬಲಗಾಲಿಗೆ ಗಾಯಗಳಾಗಿರುತ್ತವೆ. ಆರೋಪಿತನು ಬಸ್ ನಿಲ್ಲಿಸಿದ್ದು ಅದರ ಬಸ್ ನಂ ಕೆ ಎ 34 755 ಅಂತಾ ಇರುತ್ತದೆ. ಆರೋಪಿಯ ಹೆಸರು ರಾಘವೇಂದ್ರ ರೆಡ್ಡಿ ಅಂತಾ ಇರುತ್ತದೆ.

2. ನನ್ನನ್ನು ಸಿರುಗುಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಿರುತ್ತಾರೆ. ಚಾಸಾ 2 ರವರನ್ನು ಬಳ್ಳಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಂತರ ಪೋಲೀಸರು ಸದರಿ ದಿನವೇ ಆಸ್ಪತ್ರೆಗೆ ಭೇಟಿ ನೀಡಿ ನನ್ನ ಹೇಳಿಕೆ ಪಡೆದಿರುತ್ತಾರೆ. ಸದರಿ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

3. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿ ಆ ದಿನ ಬಸ್ ಚಲಾಯಿಸುತ್ತಿದ್ದ ವ್ಯಕ್ತಿಯು ಈತನೆಂದು ನುಡಿಯುತ್ತಾರೆ.

ಪಾಟೀ ಸವಾಲುಃಶ್ರೀ ಹೆಚ್ ಎಂ ವಕೀಲರಿಂದ

ನಾನು ಎಸ್ ಎಸ್ ಎಲ್ ಸಿ ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಪೋಲೀಸರು ನನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ. ನಾನು ನನ್ನ ಹೇಳಿಕೆಯನ್ನು ದಿನಾಂಕ 18.02.2015 ರಂದು ನೀಡಿರುತ್ತೇನೆ. ನಾವು ಹಚ್ಚೋಳಿಯಿಂದ 9 ಗಂಟೆಗೆ ಹೊರಟಿರುತ್ತೇವೆ. ಚಾಸಾ 2 ರವರು ವೈರಿಂಗ್ ಕೆಲಸ ಮಾಡುತ್ತಾರೆ. ಅಪಘಾತಕ್ಕೊಳಗಾದ ಮೋಟಾರ್ ಸೈಕಲ್ ಚಾಸಾ 2 ರವರ ತಂದೆಯ ಹೆಸರಿನಲ್ಲಿರುತ್ತದೆ. ನನ್ನದು ವಾಹನ ಚಾಲನಾ ಪತ್ರ ಇರುವುದಿಲ್ಲ. ಘಟನಾ ಸ್ಥಳಕ್ಕೂ ಮತ್ತು ವೆಲ್‌ಕಮ್ ಬೋರ್ಡ್‌ಗೂ ಅರ್ಧ ಕಿಲೋಮೀಟರ್ ಅಂತರವಿರುತ್ತದೆ. ನಮ್ಮ ಹಿಂದೆ ಬುಲೆರೋ ಬರುತ್ತಿತ್ತು. ಅದು 10 ನಿಮಿಷದಿಂದ ನಮ್ಮ ಹಿಂದೆ ಬರುತ್ತಿತ್ತು. ಅಪಘಾತ ಸ್ಥಳಕ್ಕಿಂತ ಮುಂಚೆ ರಸ್ತೆತಡೆ ದಿನ್ನೆ (ಹಬ್ಸ್) ಇರುತ್ತದೆ ಎಂದರೆ ನಿಜ. ಘಟನಾ ಸ್ಥಳದಲ್ಲಿ ಇಟ್ಟಿಗೆ ಬಟ್ಟಿ ಇರುವುದಿಲ್ಲ. ಘಟನಾ ಸ್ಥಳದ ಹತ್ತಿರ ರಸ್ತೆಯ ತಿರುವು ಇರುತ್ತದೆ ಎಂದರೆ ಸರಿಯಲ್ಲ. ನಾನು ಹಿಂದೆ ಕುಳಿತಿದ್ದರೂ ಸಹ ನನಗೆ ಎದುರಿನ ದೃಶ್ಯಗಳು ಕಾಣುತ್ತಿದ್ದವು. ಬುಲೆರೋ ವಾಹನವು ನಿಧಾನವಾಗಿ ಬರುತ್ತಿತ್ತು.

ಬುಲರೋ ವಾಹನವು ನಮ್ಮನ್ನು ಓವರ್‌ಟೇಕ್ ಮಾಡಿ ಮುಂದೆ ಹೋದ ಬಗ್ಗೆ ಗೊತ್ತಿರುವುದಿಲ್ಲ. ಅಪಘಾತವಾದ ನಂತರ ಜನರು ಸೇರಿದ್ದರು. ನಾನು ಚಿಕಿತ್ಸೆ ಪಡೆದಾಗ 11.30 ಗಂಟೆಯಾಗಿತ್ತು. ನಾನು ಆಸ್ಪತ್ರೆಯಲ್ಲಿ ಒಂದು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಪ್ರಯಾಣಿಸುತ್ತಿದ್ದ ಮೋಟಾರ್ ಸೈಕಲ್‌ಗೆ ಇನ್ಸೂರೆನ್ಸ್ ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.  ಸಾಕ್ಷಿಯು ಮುಂದುವರೆದು ಚಾಸಾ 2 ರವರಿಗೆ ಗೊತ್ತು ಎಂದು ನುಡಿಯುತ್ತಾರೆ. ನನಗೆ ಆರೋಪಿಯ ತಂದೆಯ ಹೆಸರು ಮತ್ತು ಬಾಡ್ಜ್ ನಂಬರ್ ಗೊತ್ತಿರುವುದಿಲ್ಲ. ನಾನು ಬುಲೆರೋ ವಾಹನದ ವಿರುದ್ದ ಹೇಳಿಕೆ ನೀಡಿರುವುದಿಲ್ಲ.

2. ನಾನು ಅಪಘಾತ ವಿಮಾ ಪರಿಹಾರ ಕೋರಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಹೇಳಿಕೆಯನ್ನು ನಾನೇ ಸ್ವತಃ ನೀಡಿರುತ್ತೇನೆ.

3. ನಾವು ಹೋಗುತ್ತಿದ್ದ ಮೋಟಾರ್ ಸೈಕಲ್‌ಗೆ ಹಿಂದಿನಿಂದ ಬರುತ್ತಿದ್ದ ಬುಲೆರೋ ವಾಹನವು ಓವರ್‌ಟೇಕ್ ಮಾಡಲು ಹೋಗಿ ಮುಂದೆ ವೇಗತಡೆ ಇರುವುದರಿಂದ ಎರಡು ವಾಹನಗಳ ಮಧ್ಯೆ ಡಿಕ್ಕಿ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಬುಲೆರೋ ವಾಹನ ಮತ್ತು ಮೋಟಾರ್ ಸೈಕಲ್‌ಗೆ ಇನ್ಸೂರೆನ್ಸ್ ಇರದೇ ಇರುವುದರಿಂದ ಆರೋಪಿ ಚಲಾಯಿಸುತ್ತಿದ್ದ ಬಸ್ಸಿನ ಮೇಲೆ ಪರಿಹಾರ ಪಡೆಯುವುದಕ್ಕಾಗಿ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿ ಚಲಾಯಿಸುತ್ತಿದ್ದ ಬಸ್ಸಿನಿಂದ ಯಾವುದೇ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸಿರುಗುಪ್ಪ-ಹಾಲ್ವಿ ಗ್ರಾಮಕ್ಕೆ ಖಾಯಂ ಬಸ್ ಚಾಲಕನಾಗಿರುವುದರಿಂದ ಆತನಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 2 ರವರಿಗೆ ವಾಹನಾ ಚಾಲನಾ ಪತ್ರ ಇರದೇ ಇರುವುದರಿಂದ ಆತನಿಗೆ ಸರಿಯಾಗಿ ಮೋಟಾರ್ ಸೈಕಲ್ ಚಾಲನೆ ಮಾಡಲು ಬರದೇ ಇರುವುದರಿಂದ, ಬುಲೆರೋ ವಾಹನ ಹಿಂದಿಕ್ಕಲು

ಅತಿವೇಗವಾಗಿ ಮೋಟಾರ್ ಸೈಕಲ್ ಚಲಾಯಿಸಿ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಯಾರಿಗೂ ಗಾಯಗಳಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಜೆ ಎಂ ಎಫ್ ಸಿ ಸಿರುಗುಪ್ಪ

ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಸಿರುಗುಪ್ಪ
**ಸಿ.ಸಿ.ನಂ:673/2015**

**ಸಿಡಬ್ಲೂ 02 ಪಿ.ಡಬ್ಲೂ 02**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪೃಥ್ವಿರಾಜ್ |
| ತಂದೆಯ ಹೆಸರು | ಃ | ಮಲ್ಲಿಕಾರ್ಜುನ |
| ವಯಸ್ಸು | ಃ | 25 ವರ್ಷ |
| ವೃತ್ತಿ | ಃ | ಮೋಟಾರ್ ಮೆಕಾನಿಕ್ |
| ವಾಸ | ಃ | ಹಚ್ಚೋಳಿ ಗ್ರಾಮ |

ಪ್ರಮಾಣ ಮಾಡಿದ ದಿನಾಂಕಃ11.04.2018 ಮುಖ್ಯ ವಿಚಾರಣೆಃ ಎ .ಪಿ .ಪಿ ಇವರಿಂದ.

ಚಾಸಾ 1 ಪರಿಚಯವಿರುತ್ತಾರೆ. ದಿನಾಂಕ 18.02.2015 ರಂದು ನಾನು ಮತ್ತು ಚಾಸಾ 1 ಕೂಡಿಕೊಂಡು ನನ್ನ ಮೋಟಾರ್ ಸೈಕಲ್ ನಂ ಕೆ ಎ 34 ಇ ಸಿ 0449 ನೇದ್ದರಿಲ್ಲಿ ಹಚ್ಚೋಳಿಯಿಂದ ಬಳ್ಳಾರಿಗೆ ಹೊರಟಿದ್ದೆವು. ಮೋಟಾರ್ ಸೈಕಲನ್ನು ನಾನು ನಡೆಸುತ್ತಿದ್ದೆನು. ಸಿಂಧನೂರು-ಸಿರುಗುಪ್ಪ ಮುಖ್ಯ ರಸ್ತೆಯ ಮೇಲೆ ಸಿರುಗುಪ್ಪ ಕಡೆಗೆ ಬರುತ್ತಿರುವಾಗ ಸಿರುಗುಪ್ಪ ನಗರದ ವೆಲ್‌ಕಮ್ ಬೋರ್ಡ್ ಹತ್ತಿರ ಎಡಬದಿಯ ರಸ್ತೆಯಲ್ಲಿ ನಾವು ಹೋಗುತ್ತಿರುವಾಗ ಆರೋಪಿತನು ತನ್ನ ಬಸನ್ನು ಅತಿ ವೇಗವಾಗಿ ಚಲಾಯಿಸಿಕೊಂಡು ಬಂದು ನಮಗೆ ಡಿಕ್ಕಿ ಪಡೆಸಿರುತ್ತಾನೆ. ಆಗ ಸಮಯ 10.45 ಗಂಟೆಯಾಗಿರುತ್ತದೆ. ಅದರಂತೆ ನಮ್ಮ ಹಿಂದೆ ಬರುತ್ತಿದ್ದ ಬುಲೆರೋ ಗಾಡಿಗೂ ಸಹ ಅಪಘಾತವಾಗಿರುತ್ತದೆ. ಇದರಿಂದ ನಾವು ಮೋಟಾರ್ ಸಮೇತ ಕೆಳಕ್ಕೆ ಬಿದ್ದೆವು. ನನಗೆ ರವರಿಗೆ ಮುಖಕ್ಕೆ ಗಾಯವಾಗಿ ಹಲ್ಲಿನ ಒಸಡು ಕಿತ್ತಿತ್ತು ಮತ್ತು ನಾ ಲಿಗೆ ಕತ್ತರಿಸಿತ್ತು ತುಟಿಯ ಮೇಲ್ಭಾಗದಲ್ಲಿ ಹರಿದ ಗಾಯವಾಗಿತ್ತು, ಹಣೆಗೆ ಮಧ್ಯದಲ್ಲಿ ಗಾಯವಾಗಿತ್ತು, ಎಡಗಡೆಯ ತೊಡೆಯ ಮಧ್ಯದಲ್ಲಿ ಗಾಯವಾಗಿತ್ತು ಮತ್ತು ಎಡಕೈನ ಎಲುಬು ಮುರಿದು ಗಾಯಗಳಾಗಿದ್ದವು. ಚಾಸಾ 2 ರವರಿಗೆ ಮುಖ ಮತ್ತು ಬೆನ್ನಿಗೆ ಗಾಯಗಳಾಗಿರುತ್ತವೆ. ಮೋಟಾರ್ ಸೈಕಲ್ ಜಖಂ ಆಗಿರುತ್ತದೆ. ಅಪಘಾತದಲ್ಲಿ ಬುಲರೋ ವಾಹನದಲ್ಲಿ ಯಾರಿಗೆ ಗಾಯವಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಆದರೆ ನಾನು ಬಸ್

ಚಾಲಕನನ್ನು ನೋಡಿರುತ್ತೇನೆ. ಆರೋಪಿತನು ಬಸ್ ನಿಲ್ಲಿಸಿದ್ದು ಅದರ ಬಸ್ ನಂ ಕೆ ಎ 34 755 ಅಂತಾ ಇರುತ್ತದೆ. ಆರೋಪಿಯ ಹೆಸರು ರಾಘವೇಂದ್ರ ರೆಡ್ಡಿ ಅಂತಾ ಇರುತ್ತದೆ.

2. ನನ್ನನ್ನು ಸಿರುಗುಪ್ಪ ಆಸ್ಪತ್ರೆಗೆ ಚಿಕಿತ್ಸೆಗಾಗಿ ತೆಗೆದುಕೊಂಡು ಹೋಗಿದ್ದರು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಚಾಸಾ 1 ರವರನ್ನು ಸಿರುಗುಪ್ಪ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಾನು ಆಸ್ಪತ್ರೆಯಲ್ಲಿ 20 ದಿನಗಳ ವರೆಗೆ ಚಿಕಿತ್ಸೆ ನೀಡಿರುತ್ತೇನೆ. ನಂತರ ನಾನು ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಪೋಲೀಸರಗೆ ಹೇಳಿಕೆ ನೀಡಿರುತ್ತೇನೆ.

3. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿ ಆ ದಿನ ಬಸ್ ಚಲಾಯಿಸುತ್ತಿದ್ದ ವ್ಯಕ್ತಿಯು ಈತನೆಂದು ನುಡಿಯುತ್ತಾರೆ.

ಪಾಟೀ ಸವಾಲುಃಶ್ರೀ ಹೆಚ್ ಎಂ ವಕೀಲರಿಂದ

ನನಗೆ ಘಟನೆ ಬಗ್ಗೆ ಹೇಳಿಕೆ ನೀಡುವಂತೆ ಪೋಲೀಸರು ನೋಟೀಸ್ ನೀಡಿರುವುದಿಲ್ಲ. ನಾನು ದಿನಾಂಕ 07.03.2015 ರಂದು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಾನು ಹೇಳಿಕೆ ನೀಡುವಾಗ ಹೇಳಿಕೆ ನೀಡುತ್ತಿರುವ ಸಮಯವನ್ನು ನನ್ನ ಹೇಳಿಕೆಯಲ್ಲಿ ಬರೆಸಿರುವುದಿಲ್ಲ. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆದರೆ ಅವರ ಹೆಸರು ಹೇಳಲು ಬರುವುದಿಲ್ಲ.

2. ನಾವು ಹಚ್ಚೋಳಿಯನ್ನು 10-10.30 ರ ಸಮಯದಲ್ಲಿ ಬಿಟ್ಟಿರುತ್ತೇವೆ. ನಾನು ಮೋಟಾರ್ ಮೆಕಾನಿಕ್‌ನಾಗಿ ಕೆಲಸ ಮಾಡುತ್ತೇನೆ. ನನಗೆ ವಾಹನ ಚಾಲನಾ ಪತ್ರ ಇರುವುದಿಲ್ಲ. ನನಗೆ ಮೋಟಾರ್ ಸೈಕಲನ್ನು ವಾಹನಾ ಚಾಲನಾ ಪತ್ರ ಇಲ್ಲದೆ ಚಲಾಯಿಸಬಾರದೆಂಬ ಬಗ್ಗೆ ಗೊತ್ತಿರುವುದಿಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ

ಪಡೆದುಕೊಂಡ ಬಗ್ಗೆ ಸಮ್ಮರಿ ರಿಪೋರ್ಟನ್ನು ಪೋಲೀಸರಿಗೆ ನೀಡಿರುತ್ತೇನೆ. ಅಪಘಾತ ನಡೆದ ಸ್ಥಳಕ್ಕೂ ಮತ್ತು ವೆಲ್‌ಕಮ್ ಬೋರ್ಡ್‌ಗೂ 10 ರಿಂದ 15 ಅಡಿ ಅಂತರವಿರುತ್ತದೆ. ನನಗೆ ಅಪಘಾತ ನಡೆದ ಸ್ಥಳದಕ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ವೆಲ್‌ಕಮ್ ಬೋರ್ಡ್ ದಾಟಿದ ನಂತರ ದರ್ಗಾದ ಹತ್ತಿರ ವೇಗತಡೆ(ಹಬ್ಸ್) ಇರುತ್ತದೆ ಎಂದರೆ ಸರಿ. ಸಿರುಗುಪ್ಪ-ಸಿಂಧನೂರು ರಸ್ತೆಯ ಮೇಲೆ ಬಹಳಷ್ಟು ವಾಹನಗಳು ಸಂಚರಿಸುತವೆ ಎಂದರೆ ಸರಿ. ಘಟನಾ ಸ್ಥಳದಿಂದ ಅರ್ಧ ಕಿಲೋಮೀಟರ್ ಅಂತರದಲ್ಲಿ ಅಕ್ಕಿ-ಗಿರಣಿ ಮತ್ತು ಪೆಟ್ರೋಲ್‌ಬಂಕ್ ಇರುತ್ತವೆ. ಪೆಟ್ರೋಲ್ ಬಂಕ್ ಹತ್ತಿರ ಬಹಳಷ್ಟು ವಾಹನಗಳು ಇರುತ್ತವೆ ಎಂದರೆ ಸರಿ. ನನ್ನ ನಾನು ಚಲಾಯಿಸುತ್ತಿದ್ದ ಮೋಟಾರ್ ಸೈಕಲ್ ಕನ್ನಡಕದಲ್ಲಿ ಹಿಂದೆ ಬರುತ್ತಿದ್ದ ವಾಹನಗಳ ಬಗ್ಗೆ ಗೊತ್ತಾಗುತತದೆ. ನನ್ನ ಮೋಟಾರ್ ಸೈಕಲ್ ಬುಲೆರೋ ವಾಹನ ಬರುತ್ತಿತ್ತು. ಬುಲೆರೋ ವಾಹನವು ಎಷ್ಟು ಸಮಯದಿಂದ ನಮ್ಮ ಹಿಂದೆ ಬರುತ್ತಿತ್ತು ಎಂದು ಹೇಳಲು ಬರುವುದಿಲ್ಲ. ಬುಲೆರೋ ವಾಹನ ಸಂಖ್ಯೆ ಹೇಳಲು ಬರುವುದಿಲ್ಲ. ಅಪಘಾತ ನಡೆದ ನಂತರ ಕೆಳಗೆ ಬಿದ್ದಾಗ ಬಸ್ ಚಾಲಕ ಮತ್ತು ಮತ್ತು ಬುಲರೋ ವಾಹನ ನೋಡಿದ ನಂತರ ಪ್ರಜ್ಞೆ ತಪ್ಪಿರುತ್ತದೆ. ನನ್ನನ್ನು ಆಸ್ಪತ್ರೆಗೆ ಯಾರು ದಾಖಲಿಸಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ನಾನು ಚಿಕಿತ್ಸೆ ಪಡೆದಕೊಂಡಾಗ ಸಮಯ 12 ಗಂಟೆಯಾಗಿರುತ್ತದೆ. ನನಗೆ ಬಳ್ಳಾರಿ ಆಸ್ಪತ್ರೆಗೆ ಹೇಗೆ ಹೋಗಿರುತ್ತೇನೆ ಎಂದು ಗೊತ್ತಿರುವುದಿಲ್ಲ.

2. ನಾನು ನನ್ನ ಹೇಳಿಕೆಯಲ್ಲಿ ಆರೋಪಿಯ ಹೆಸರು ಮತ್ತು ಬಸ್ ನಂಬರ್ ಬರೆಸಿರುತ್ತೇನೆ. ನನ್ನ ಹೇಳಿಕೆಯಲ್ಲಿ ನಾನು ಬುಲೆರೋ ವಾಹನ ಬರುತ್ತಿದ್ದ ಬಗ್ಗೆ ಹೇಳಿರುತ್ತೇನೆ. ಆದರೆ ಬುಲೆರೋ ವಾಹನದ ನಂಬರ್ ಹೇಳಿ ಬರೆಸಿರುವುದಿಲ್ಲ. ನಾನು ನನ್ನ ಹೇಳಿಕೆಯಲ್ಲಿ ಯಾವ ಸವಯದಲ್ಲಿ ಎಲ್ಲಿಂದ ಎಲ್ಲಿಯವರೆಗೆ ಪ್ರಯಾಣ ಮಾಡುತ್ತಿದ್ದೆವು ಎಂದು ಹೇಳಿ ಬರೆಸಿರುವುದಿಲ್ಲ. ಅಪಘಾತ ಸ್ಥಳದಲ್ಲಿ ರಸ್ತೆಯ ಮೇಲೆ

ವೇಗತಡೆ ದಿಬ್ಬ ಇರುವುದರಿಂದ ಬಸ್ಸಿಗೂ ಮತ್ತು ಮೋಟಾರ್ ಸೈಕಲ್‌ಗೂ ಅಪಘಾತ ಸಂಭವಿಸಿರುವುದಿಲ್ಲ ಎಂದರೆ ಸರಿಯಲ್ಲ.

3. ನಾನು ಚಲಾಯಿಸುತ್ತಿದ್ದ ಮೋಟಾರ್ ಸೈಕಲ್‌ಗೆ ಹಿಂದಿನಿಂದ ಬರುತ್ತಿದ್ದ ಬುಲೆರೋ ವಾಹನವು ಓವರ್‌ಟೇಕ್ ಮಾಡಲು ಹೋಗಿ ಮುಂದೆ ವೇಗತಡೆ ಇರುವುದರಿಂದ ಎರಡು ವಾಹನಗಳ ಮಧ್ಯೆ ಡಿಕ್ಕಿ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಬುಲೆರೋ ವಾಹನ ಮತ್ತು ಮೋಟಾರ್ ಸೈಕಲ್‌ಗೆ ಇನ್ಸೂರೆನ್ಸ್ ಇರದೇ ಇರುವುದರಿಂದ ಆರೋಪಿ ಚಲಾಯಿಸುತ್ತಿದ್ದ ಬಸ್ಸಿನ ಮೇಲೆ ಪರಿಹಾರ ಪಡೆಯುವುದಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿ ಚಲಾಯಿಸುತ್ತಿದ್ದ ಬಸ್ಸಿನಿಂದ ಯಾವುದೇ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸಿರುಗುಪ್ಪ-ಹಾಲ್ವಿ ಗ್ರಾಮಕ್ಕೆ ಖಾಯಂ ಬಸ್ ಚಾಲಕನಾಗಿರುವುದರಿಂದ ಆತನಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಾಹನಾ ಚಾಲನಾ ಪತ್ರ ಇರದೇ ಇರುವುದರಿಂದ ನನಗೆ ಸರಿಯಾಗಿ ಮೋಟಾರ್ ಸೈಕಲ್ ಚಾಲನೆ ಮಾಡಲು ಬರದೇ ಇರುವುದರಿಂದ, ಬುಲೆರೋ ವಾಹನ ಹಿಂದಿಕ್ಕಲು ಅತಿವೇಗವಾಗಿ ಮೋಟಾರ್ ಸೈಕಲ್ ಚಲಾಯಿಸಿ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಯಾರಿಗೂ ಗಾಯಗಳಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಜೆ ಎಂ ಎಫ್ ಸಿ ಸಿರುಗುಪ್ಪ